# ರಾಮಕೃಷ್ಣ ಸುದ್ದಿ ಸಂಚಯ

**ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ., ಮಂಗಳೂರು**

ಇದರ ಮುಖವಾಣಿ ತ್ರೈಮಾಸಿಕ ಸುದ್ದಿ ಪತ್ರಿಕೆ

ESTD : 1994

ವಿಳಾಸ : 2ನೇ ಮಹಡಿ, ಅಮೃತೋತ್ಸವ ಕಟ್ಟಡ, ಬಂಟ್ಸ್ ಹಾಸ್ಟೆಲ್ ಸರ್ಕಲ್, ಮಂಗಳೂರು–575 003.

Website : www.ramakrishnacredit.com Email : ho@ramakrishnacredit.com Private Circulation only

ಸಂಪುಟ : VI ಸಂಚಿಕೆ : 3 ಎಲ್ಲರೂ ಒಬ್ಬನಿಗಾಗಿ, ಒಬ್ಬನು ಎಲ್ಲರಿಗಾಗಿ ಅಕ್ಟೋಬರ್–ಡಿಸೆಂಬರ್ 2020


## ಅಧ್ಯಕ್ಷರ ಮಾತು



ಶ್ರೀ ಕೆ. ಜೈರಾಜ್ ಬಿ. ರೈ
ಅಧ್ಯಕ್ಷರು

2021ನೇ ಸಾಲು, ಎಲ್ಲರಿಗೂ ಸುಖ, ನೆಮ್ಮದಿ, ಶಾಂತಿಯನ್ನು ನೀಡಲಿ ಎಂದು ಭಗವಂತನೊಡನೆ ಪ್ರಾರ್ಥನೆ ಹಾಗೂ ಎಲ್ಲರಿಗೂ 2021ನೇ ಹೊಸ ವರ್ಷದ ಹಾರ್ದಿಕ ಶುಭಾಶಯಗಳು.

ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ–ಓಪರೇಟಿವ್ ಸೊಸೈಟಿಯು ಹಿಂದಿನ ಸಾಲಿನಂತೆ, 31.12.2020ಕ್ಕೆ ಅಂತ್ಯವಾದ ತ್ರೈಮಾಸಿಕದಲ್ಲಿ, ಅತೀ ಉತ್ತಮ ಪ್ರಗತಿಯನ್ನು ಸಾಧಿಸಿದೆ ಎಂದು ತಮಗೆಲ್ಲರಿಗೂ ತಿಳಿಯಪಡಿಸಲು ಬಹಳ ಸಂತೋಷಪಡುತ್ತೇನೆ. ಸಂಘವು ಡಿಸೆಂಬರ್ 2019 ರಿಂದ ಡಿಸೆಂಬರ್ 2020ರ 1 ವರ್ಷದ ಅವಧಿಗೆ ಒಟ್ಟು ರೂ.102 ಕೋಟಿ ಹೆಚ್ಚಳ ದಾಖಲಿಸಿ, ಸಾರ್ವಕಾಲಿಕ ವೃದ್ಧಿಯನ್ನು ದಾಖಲಿಸಿದೆ. ಸಂಘವು ಸ್ಥಾಪನೆಯ 26 ವರ್ಷದ ಅವಧಿಯಲ್ಲಿ ರೂ.500 ಕೋಟಿಯಷ್ಟು ಒಟ್ಟು ವ್ಯವಹಾರ ದಾಖಲಿಸಿದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಪ್ರಥಮ ಕ್ರೆಡಿಟ್ ಕೋ–ಓಪರೇಟಿವ್ ಸೊಸೈಟಿಯಾಗಿ ಮೂಡಿ ಬಂದಿದೆ. ಸಂಘಕ್ಕೆ ಹೊಸ ಐದು ಶಾಖೆಗಳನ್ನು ತೆರೆಯಲು ಇಲಾಖಾನುಮತಿಯು ಲಭಿಸಿದೆ.

**31.12.2020 ಸಂಘದ ವ್ಯವಹಾರದ ಪಕ್ಷಿನೋಟ (Provisional Figures)**

| ಕ್ರ. ಸಂ. | ಕಾರ್ಯ ವಿಭಾಗ | ಡಿಸೆಂಬರ್ 2019ಕ್ಕೆ ಇದ್ದಂತೆ (₹) | ಡಿಸೆಂಬರ್ 2020ಕ್ಕೆ ಇದ್ದಂತೆ (₹) | ಹೆಚ್ಚಳ (₹) | ಶೇಕಡಾವಾರು ವೃದ್ಧಿ |
|---|---|---|---|---|---|
| 1 | ಠೇವಣಾತಿಗಳು | ₹226 ಕೋಟಿ | ₹282 ಕೋಟಿ | ₹56 ಕೋಟಿ | 25% |
| 2 | ಸಾಲ ಮತ್ತು ಮುಂಗಡ | ₹184 ಕೋಟಿ | ₹230 ಕೋಟಿ | ₹46 ಕೋಟಿ | 25% |
| 3 | ಒಟ್ಟು ವ್ಯವಹಾರ | ₹410 ಕೋಟಿ | ₹512 ಕೋಟಿ | ₹102 ಕೋಟಿ | 25% |
| 4 | ನಿವ್ವಳ ಲಾಭ | ₹3.58 ಕೋಟಿ | ₹4.46 ಕೋಟಿ | ₹88 ಲಕ್ಷ | 25% |
| 5 | ಅನುತ್ಪಾದಕ ಆಸ್ತಿ (Absolute) | ₹35 ಲಕ್ಷ | ₹22 ಲಕ್ಷ | – | – |
| | ಶೇಕಡಾವಾರು | 0.19% | 0.10% | – | – |
| 6 | ನಿವ್ವಳ ಅನುತ್ಪಾದಕ ಆಸ್ತಿ | 0% | 0% | – | – |

31.12.2019ಕ್ಕೆ ಇದ್ದ ವ್ಯವಹಾರವನ್ನು 31.12.2020ರ ವ್ಯವಹಾರಕ್ಕೆ ಹೋಲಿಸಿದಾಗ

1. ಠೇವಣಾತಿಯಲ್ಲಿ ರೂ.56 ಕೋಟಿ ಹೆಚ್ಚಳ (ಶೇ.25 ವೃದ್ಧಿ)
2. ಸಾಲ ಮತ್ತು ಮುಂಗಡದಲ್ಲಿ ರೂ.46 ಕೋಟಿ ಹೆಚ್ಚಳ (ಶೇ.25 ವೃದ್ಧಿ).
3. ಒಟ್ಟು ವ್ಯವಹಾರದಲ್ಲಿ ರೂ.102 ಕೋಟಿ ವೃದ್ಧಿ. (ಶೇ.25 ವೃದ್ಧಿ)
4. Gross NPA ರೂ.13 ಲಕ್ಷ ಕಡಿಮೆ (ಶೇ.0.09% ಕಡಿಮೆ).
5. ನಿವ್ವಳ ಅನುತ್ಪಾದಕ ಆಸ್ತಿ (Net NPA) 0%.
6. ನಿವ್ವಳ ಲಾಭದಲ್ಲಿ ರೂ.88 ಲಕ್ಷ ಹೆಚ್ಚಳಗೊಂಡು (ಶೇ.25 ವೃದ್ಧಿ)

ಸಂಘವು ಎಲ್ಲಾ ಕಾರ್ಯವೈಖರಿಯಲ್ಲಿ ಬಹಳ ಉತ್ತಮ ಪ್ರಗತಿಯನ್ನು ಸಾಧಿಸಿ, ಬಹಳ ಸುದೃಢವಾಗಿದೆ ಎಂದು ತಿಳಿಸಲು ತುಂಬಾ ಸಂತೋಷಪಡುತ್ತೇನೆ.

ಸಂಘದ ಸದಸ್ಯ ಠೇವಣಿದಾರರು ತೋರಿರುವ ಅದಮ್ಯ ವಿಶ್ವಾಸ, ಸಾಲಗಾರ ಸದಸ್ಯರ ಸಹಕಾರ, ಸಂಘದ ಆಡಳಿತ ಮಂಡಳಿ ಸದಸ್ಯರ ಮಾರ್ಗದರ್ಶನ, ಎಲ್ಲಾ ಶಾಖಾ ಸಲಹಾ ಸಮಿತಿ ಅಧ್ಯಕ್ಷರು ಹಾಗೂ ಸದಸ್ಯರುಗಳ ಸಹಭಾಗಿತ್ವ, ಸಂಘದ ಶಾಖಾಧಿಕಾರಿಗಳು ಮತ್ತು ಸಿಬ್ಬಂದಿಗಳ ಅಪಾರ ಶ್ರಮ, ಈ ಕ್ಲಿಷ್ಟಕರ ಸಂದರ್ಭದಲ್ಲೂ, ಉತ್ತಮ ರೀತಿಯಲ್ಲಿ ಸಂಘದ ವ್ಯವಹಾರಾಭಿವೃದ್ಧಿಯಾಗಲು ಕಾರಣವಾಗಿದೆ. ನಿಮಗೆಲ್ಲರಿಗೂ ನನ್ನ ವೈಯಕ್ತಿಕ ನೆಲೆಯಲ್ಲಿ ಹಾಗೂ ಸಂಘದ ವತಿಯಿಂದ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.

**ಕೆ. ಜೈರಾಜ್ ಬಿ. ರೈ,**
ಅಧ್ಯಕ್ಷರು

# ಸಂಘದ 26ನೇ ವಾರ್ಷಿಕ ಮಹಾಸಭೆ – 2019–20ನೇ ಸಾಲಿಗೆ ಶೇ.25 ಡಿವಿಡೆಂಡ್




ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ–ಓಪರೇಟಿವ್ ಸೊಸೈಟಿಯ 26ನೇ ವಾರ್ಷಿಕ ಮಹಾಸಭೆ, ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರ ಅಧ್ಯಕ್ಷತೆಯಲ್ಲಿ ಮಂಗಳೂರಿನ ಉರ್ವ ಸೆಂಟನರಿ ಚರ್ಚ್ ಹಾಲ್‌ನಲ್ಲಿ ದಿನಾಂಕ 20.12.2020 ರಂದು ಜರಗಿತು.

ಸಂಘವು 31.03.2020ಕ್ಕೆ ಅಂತ್ಯವಾದ, 2019–20ನೇ ಸಾಲಿನಲ್ಲಿ ರೂ.6.22 ಕೋಟಿ ನಿವ್ವಳ ಲಾಭ ಗಳಿಸಿದ್ದು, ಲಾಭ ವಿಂಗಡಣೆಯಲ್ಲಿ ಸದಸ್ಯರಿಗೆ ಶೇ.25 ಡಿವಿಡೆಂಡ್‌ನ್ನು ನೀಡಲು ಮಹಾಸಭೆಯು ನಿರ್ಧರಿಸಿದೆ.

ಸಂಘವು ಹಲವಾರು ಸಮಾಜಮುಖಿ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿದ್ದು ಕೋವಿಡ್–19ರ ಸಂಕಷ್ಟದ ಸಮಯದಲ್ಲಿ ರೂ.7 ಲಕ್ಷಕ್ಕೂ ಮಿಕ್ಕಿದ ವಿವಿಧ ರೀತಿಯ ಆರ್ಥಿಕ ನೆರವನ್ನು ಸಂತ್ರಸ್ತರಿಗೆ ನೀಡಲಾಗಿದೆ. ಕೇಂದ್ರ ಕಛೇರಿಯ ನೂತನ ಕಟ್ಟಡವನ್ನು ಸಂಘದ ಸ್ವಂತ ನಿವೇಶನದಲ್ಲಿ ಮುಂದಿನ 3 ವರ್ಷಗಳ ಅವಧಿಯಲ್ಲಿ ನಿರ್ಮಿಸುವುದು, ಮುಂದಿನ ಸಾಲಿನ ವಾರ್ಷಿಕ ಮಹಾಸಭೆಯ ಮೊದಲು ಹೊಸ 5 ಶಾಖೆಗಳನ್ನು ಆರಂಭಿಸಿ ಸಂಘದ ಶಾಖೆಗಳ ಸಂಖ್ಯೆ 25ಕ್ಕೆ ಹೆಚ್ಚಿಸುವುದು ಮತ್ತು ಕೋರ್ ಬ್ಯಾಂಕಿಂಗ್ ತಂತ್ರಜ್ಞಾನವನ್ನು ಅಳವಡಿಸುವ ಬಗ್ಗೆ ಕಾರ್ಯಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈ ರವರು ಸಭೆಗೆ ತಿಳಿಸಿದರು.

ಪ್ರಭಾರ ಮಹಾಪ್ರಬಂಧಕ ಶ್ರೀ ಗಣೇಶ್ ಜಿ.ಕೆ. ಲೆಕ್ಕಪರಿಶೋಧಿತ ಆರ್ಥಿಕ ತಖ್ತೆ, ಲಾಭ ವಿಂಗಡಣೆ, ಬಜೆಟ್, ಬೈಲಾ ತಿದ್ದುಪಡಿ ಪ್ರಸ್ತಾವನೆಗಳನ್ನು ಮಂಡಿಸಿದರು.

2019–20 ಸಾಲಿನಲ್ಲಿ ನಿಗದಿತ ಗುರಿಯನ್ನು ಸಾಧಿಸಿ ಅತ್ಯುತ್ತಮ ಕಾರ್ಯನಿರ್ವಹಣೆ ತೋರಿದ ಹೆಬ್ರಿ, ಕುಂದಾಪುರ, ವೆಲೆನ್ಸಿಯಾ, ಸುರತ್ಕಲ್, ಮಂಗಳೂರು, ಚಿಲಿಂಬಿ ಮತ್ತು ತೊಕ್ಕೊಟ್ಟು ಶಾಖೆಗಳನ್ನು ಅಭಿನಂದಿಸಲಾಯಿತು.

ಸ್ಥಾಪಕಾಧ್ಯಕ್ಷ ದಿ। ಕೆ.ಬಿ. ಜಯಪಾಲ ಶೆಟ್ಟಿ ಸ್ಮರಣಾರ್ಥ ಪ್ರತಿಭಾ ಪುರಸ್ಕಾರವನ್ನು, 2019–20 ಸಾಲಿನಲ್ಲಿ ಪಿ.ಯು.ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ ಸಿಬ್ಬಂದಿಗಳ ಮಕ್ಕಳಾದ ಕುಮಾರಿ ಮಾನಸ ರಾವ್, ಮಾಸ್ಟರ್ ಜೋಸಿತ್ ಪಿ. ಶೆಟ್ಟಿ ಮತ್ತು ಮಾಸ್ಟರ್ ವಿಖ್ಯಾತ್ ರವರಿಗೆ ನೀಡಿ ಸನ್ಮಾನಿಸಲಾಯಿತು.

ಸಂಘದ ಉಪಾಧ್ಯಕ್ಷರಾದ ಶ್ರೀಮತಿ ಲಕ್ಷ್ಮಿ ಜಯಪಾಲ ಶೆಟ್ಟಿ ಹಾಗೂ ನಿರ್ದೇಶಕರಾದ ಶ್ರೀಮತಿ ಎ. ರತ್ನಕಾಂತಿ ಶೆಟ್ಟಿ, ಡಾ। ಕೆ. ಸುಭಾಶ್ಚಂದ್ರ ಶೆಟ್ಟಿ, ಶ್ರೀ ಪಿ. ಎಸ್. ಅಡ್ಯಂತಾಯ, ಶ್ರೀ ಸಿಎ ಹೆಚ್.ಆರ್ ಶೆಟ್ಟಿ, ಶ್ರೀ ವಿಠಲ ಪಿ. ಶೆಟ್ಟಿ, ಶ್ರೀ ಅರುಣ್ ಕುಮಾರ್ ಶೆಟ್ಟಿ, ಶ್ರೀ ಪಿ.ಬಿ. ದಿವಾಕರ ರೈ, ಶ್ರೀ ರವೀಂದ್ರನಾಥ ಜಿ. ಹೆಗ್ಡೆ, ಶ್ರೀ ಕುಂಬ್ರ ದಯಾಕರ್ ಆಳ್ವ, ಶ್ರೀ ಬೆಳ್ಳಿಪಾಡಿ ಪ್ರಸಾದ್ ಕೌಶಲ್ ಶೆಟ್ಟಿ, ಡಾ। ಎಂ. ಸುಧಾಕರ ಶೆಟ್ಟಿ ಮತ್ತು ಎ. ಚಿಕ್ಕಪ್ಪ ನ್ಯಾಕ್ ಉಪಸ್ಥಿತರಿದ್ದರು.

ಸಿಬ್ಬಂದಿ ಕುಮಾರಿ ಅಶ್ವಿನಿ ಡಿ. ರೈ ಪ್ರಾರ್ಥಿಸಿದರು, ನಿರ್ದೇಶಕರಾದ ಶ್ರೀ ಕೆ. ಸೀತಾರಾಮ ರೈ ಸವಣೂರು ಸ್ವಾಗತಿಸಿದರು, ಶ್ರೀ ಯಂ. ರಾಮಯ ಶೆಟ್ಟಿ ವಂದಿಸಿದರು. ಸಿಬ್ಬಂದಿಗಳಾದ ಶ್ರೀ ಚಂದ್ರಹಾಸ ಶೆಟ್ಟಿ ಮತ್ತು ಕುಮಾರಿ ಅಶ್ವಿತ ಎಂ. ಕಾರ್ಯಕ್ರಮ ನಿರೂಪಿಸಿದರು. ಸಂಘದ ಸದಸ್ಯರು, ಕೇಂದ್ರ ಕಛೇರಿ ಮತ್ತು ಶಾಖೆಗಳ ಎಲ್ಲಾ ಸಿಬ್ಬಂದಿಗಳು ಮಹಾಸಭೆಯ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡರು.



## ಅಭಿನಂದನೆಗಳು

ವೈದ್ಯಕೀಯ ಕ್ಷೇತ್ರದಲ್ಲಿ ಸಲ್ಲಿಸಿದ ಉತ್ತಮ ಸೇವೆಗಾಗಿ ಉಡುಪಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಸಂಘದ ಕಾರ್ಕಳ ಶಾಖೆಯ ಶಾಖಾ ಸಲಹಾ ಸಮಿತಿ ಸದಸ್ಯರಾದ ಡಾ। ಎಂ. ರವಿರಾಜ್ ಶೆಟ್ಟಿಯವರನ್ನು, ಕಾರ್ಕಳ ಶಾಖಾ ಸಲಹಾ ಸಮಿತಿ ಸದಸ್ಯರು, ಕಾರ್ಕಳ ಶಾಖೆಯ ಶಾಖಾಧಿಕಾರಿ ಮತ್ತು ಸಿಬ್ಬಂದಿಗಳೊಡಗೂಡಿ ಸಂಘದ ಪರವಾಗಿ, ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈ ಯವರು ಅಭಿನಂದಿಸಿದರು.

## ಸಂಘಕ್ಕೆ 2019–20ನೇ ಸಾಲಿನ ವ್ಯವಹಾರದಲ್ಲಿ ಸರ್ವತೋಮುಖ ಪ್ರಗತಿಯನ್ನು ಸಾಧಿಸಿದ ಸಹಕಾರಿ ಸಂಘ ಪ್ರಶಸ್ತಿ



ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ–ಓಪರೇಟಿವ್ ಸೊಸೈಟಿಯು ಸಾಧಿಸಿದ ಪ್ರಗತಿಯನ್ನು ಪರಿಗಣಿಸಿ, ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್, ಮಂಗಳೂರು ಇವರು ದಿನಾಂಕ 27.11.2020ರಂದು ಜರಗಿದ ಬ್ಯಾಂಕಿನ ಮಹಾಸಭೆಯಲ್ಲಿ, ಸಂಘಕ್ಕೆ, 2019–20ನೇ ಸಾಲಿನ ವ್ಯವಹಾರದಲ್ಲಿ ಸರ್ವತೋಮುಖ ಪ್ರಗತಿಯನ್ನು ಸಾಧಿಸಿದ ಸಹಕಾರಿ ಸಂಘ ಪ್ರಶಸ್ತಿಯನ್ನು, ಬ್ಯಾಂಕಿನ ಅಧ್ಯಕ್ಷರಾದ ಡಾ. ಎಂ.ಎನ್. ರಾಜೇಂದ್ರ ಕುಮಾರ್‌ರವರು, ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈ ಹಾಗೂ ಪ್ರಭಾರ ಮಹಾ ಪ್ರಬಂಧಕರಾದ ಶ್ರೀ ಗಣೇಶ್ ಜಿ.ಕೆ.ಯವರಿಗೆ ಪ್ರದಾನ ಮಾಡಿದರು.

ನಮ್ಮ ಸಂಘದ ನಿರ್ದೇಶಕರಾದ ಶ್ರೀ ಕುಂಬ್ರ ದಯಾಕರ ಆಳ್ವ ಮತ್ತು ಬೆಳ್ಳಿಪಾಡಿ ಪ್ರಸಾದ್ ಕೌಶಲ್ ಶೆಟ್ಟಿ ಹಾಗೂ ದ.ಕ. ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರಾದ ಶ್ರೀ ಪ್ರವೀಣ್ ಬಿ. ನಾಯಕ್ ಮತ್ತು ದ.ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ವಿನಯಕುಮಾರ್ ಸೂರಿಂಜೆ, ನಿರ್ದೇಶಕರುಗಳಾದ ಶ್ರೀ ರಾಜರಾಮ ಭಟ್, ಶ್ರೀ ರಾಜು ಪೂಜಾರಿ, ಶ್ರೀ ಎಕ್ಕಾರು ಮೋನಪ್ಪ ಶೆಟ್ಟಿ, ಶ್ರೀ ಜಯರಾಮ ರೈ, ಶ್ರೀ ಭಾಸ್ಕರ್ ಕೋಟ್ಯಾನ್, ಶ್ರೀ ದೇವಿ ಪ್ರಸಾದ ಶೆಟ್ಟಿ ಬೆಳಪು, ಶ್ರೀ ಶಶಿಕುಮಾರ್ ರೈ ಬಾಲ್ಯೊಟ್ಟು, ಶ್ರೀ ರಾಜೇಶ್ ರಾವ್, ಶ್ರೀ ಅಶೋಕ್ ಕುಮಾರ್ ಶೆಟ್ಟಿ, ಶ್ರೀ ಹರೀಶ್ಚಂದ್ರ ಮತ್ತು ಉಡುಪಿ ಜಿಲ್ಲಾ ಸಹಕಾರಿ ಯೂನಿಯನ್‌ನ ಅಧ್ಯಕ್ಷರಾದ ಶ್ರೀ ಜಯಕರ ಶೆಟ್ಟಿ ಇಂದ್ರಾಳಿಯವರು ಉಪಸ್ಥಿತರಿದ್ದರು.

ಈ ಪ್ರಶಸ್ತಿಯು ಸಂಘಕ್ಕೆ 9ನೇ ಬಾರಿ, ಹಾಗೂ 2016–17ರಿಂದ 2019–20ರವರೆಗೆ ನಿರಂತರವಾಗಿ ಲಭಿಸಿದೆ.

## ಸಹಕಾರ ಶಿಕ್ಷಣ ನಿಧಿಯ ಚೆಕ್ ಹಸ್ತಾಂತರ



ಸಂಘದ 2019–20ನೇ ಸಾಲಿನ ಐನ್–ಲಾಭದಲ್ಲಿ ಸಹಕಾರ ಶಿಕ್ಷಣ ನಿಧಿಗೆ ತೆಗೆದಿರಿಸಲಾದ ₹9,32,359/– (ರೂಪಾಯಿ ಒಂಬತ್ತು ಲಕ್ಷದ ಮೂವತ್ತೆರಡು ಸಾವಿರದ ಮುನ್ನೂರ ಐವತ್ತೊಂಭತ್ತು ಮಾತ್ರ)ವನ್ನು "ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಬೆಂಗಳೂರು" ಇವರ ಹೆಸರಿಗೆ ಬರೆಯಲಾದ ಚೆಕ್ಕನ್ನು, ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರು ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಯೂನಿಯನ್‌ನ ಅಧ್ಯಕ್ಷರಾದ ಶ್ರೀ ಬೆಳ್ಳಿಪ್ಪಾಡಿ ಪ್ರಸಾದ್ ಕೌಶಲ್ ಶೆಟ್ಟಿಯವರಿಗೆ ಹಸ್ತಾಂತರಿಸಿದರು.

## ಅಭಿನಂದನೆಗಳು

- ಸಂಘದ ಸುಳ್ಯ ಶಾಖೆಯ ಸಿಬ್ಬಂದಿ ಕು. ರಾಧಿಕಾರವರ ವಿವಾಹವು ಚಿ। ರಾಕೇಶ್ ಶೆಟ್ಟಿರವರೊಂದಿಗೆ ಇತ್ತೀಚೆಗೆ ಜರಗಿತು. ವೈವಾಹಿಕ ಜೀವನಕ್ಕೆ ಕಾಲಿಟ್ಟ ನವ ವಧೂ–ವರರಿಗೆ ಹೃತ್ಪೂರ್ವಕ ಅಭಿನಂದನೆಗಳು.
- ಸಂಘದ ಕೇಂದ್ರ ಕಛೇರಿ ಸಿಬ್ಬಂದಿ ಕು. ಅಶ್ವಿನಿ ಡಿ. ರೈಯವರ ವಿವಾಹವು ಚಿ। ಸಹನ್ ಶೆಟ್ಟಿರವರೊಂದಿಗೆ ಇತ್ತೀಚೆಗೆ ಜರಗಿತು. ವೈವಾಹಿಕ ಜೀವನಕ್ಕೆ ಕಾಲಿಟ್ಟ ನವ ವಧೂ–ವರರಿಗೆ ಹೃತ್ಪೂರ್ವಕ ಅಭಿನಂದನೆಗಳು.
- ಸಂಘದ ತೊಕ್ಕೊಟ್ಟು ಶಾಖೆಯ ಸಿಬ್ಬಂದಿ ಶ್ರೀ ಅಮಿತ್‌ಕುಮಾರ್‌ರವರ ವಿವಾಹವು ಚಿ।ಸೌ। ಮಮತಾರವರೊಂದಿಗೆ ಇತ್ತೀಚೆಗೆ ಜರಗಿತು. ವೈವಾಹಿಕ ಜೀವನಕ್ಕೆ ಕಾಲಿಟ್ಟ ನವ ವಧೂ–ವರರಿಗೆ ಹೃತ್ಪೂರ್ವಕ ಅಭಿನಂದನೆಗಳು.
- ಸಂಘದ ಮುಲ್ಕಿ ಶಾಖೆಯ ಸಿಬ್ಬಂದಿ ಕು. ಕೌಸ್ತುಭ ಶೆಟ್ಟಿಯವರ ನಿಶ್ಚಿತಾರ್ಥವು ಶ್ರೀ ಚರಣ್ ಶೆಟ್ಟಿರವರೊಂದಿಗೆ ಇತ್ತೀಚೆಗೆ ಜರಗಿತು. ಇವರಿಗೆ ಹೃತ್ಪೂರ್ವಕ ಅಭಿನಂದನೆಗಳು.
- ಸಂಘದ ಉಡುಪಿ ಶಾಖೆಯ ಸಿಬ್ಬಂದಿ ಶ್ರೀ ಮೋಹನ್ ಶೆಟ್ಟಿಯವರ ನಿಶ್ಚಿತಾರ್ಥವು ಕು. ಹೇಮಲತರವರೊಂದಿಗೆ ಇತ್ತೀಚೆಗೆ ಜರಗಿತು. ಇವರಿಗೆ ಹೃತ್ಪೂರ್ವಕ ಅಭಿನಂದನೆಗಳು.

## 67ನೇ ಅಖಿಲ ಭಾರತ ಸಹಕಾರ ಸಪ್ತಾಹದ
## ರಾಜ್ಯ ಮಟ್ಟದ ಸಮಾರಂಭದಲ್ಲಿ ಸಂಘಕ್ಕೆ "ಅತ್ಯುತ್ತಮ ಸಹಕಾರ ಸಂಘ" ಪ್ರಶಸ್ತಿ



2019–20ನೇ ಸಾಲಿನಲ್ಲಿ ಸಂಘವು ಸಾಧಿಸಿದ ಸರ್ವಾಂಗೀಣ ಸಾಧನೆಯನ್ನು ಪರಿಗಣಿಸಿ ದಿನಾಂಕ 15.11.2020ರಂದು ಮಂಗಳೂರಿನಲ್ಲಿ ಜರುಗಿದ ರಾಜ್ಯ ಮಟ್ಟದ 67ನೇ ಅಖಿಲ ಭಾರತ ಸಪ್ತಾಹ ನಮ್ಮ ಸಂಘಕ್ಕೆ "ಅತ್ಯುತ್ತಮ ಸಹಕಾರಿ ಸಂಘ" ಪ್ರಶಸ್ತಿ.

ಕರ್ನಾಟಕ ಸರಕಾರದ ಸಹಕಾರ ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್, ದ.ಕ. ಜಿಲ್ಲಾ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾದ ಡಾ। ಎಂ.ಎನ್. ರಾಜೇಂದ್ರ ಕುಮಾರ್‌ರವರೊಡಗೂಡಿ, ಬಿಜೆಪಿ ರಾಜ್ಯಾಧ್ಯಕ್ಷರು ಹಾಗೂ ಮಂಗಳೂರು ಲೋಕಸಭಾ ಸಂಸದರೂ ಆದ ಶ್ರೀ ನಳಿನ್ ಕುಮಾರ್ ಕಟೀಲ್‌ರವರು, ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈ ಹಾಗೂ ಪ್ರಭಾರ ಮಹಾಪ್ರಬಂಧಕರಾದ ಶ್ರೀ ಗಣೇಶ್ ಜಿ.ಕೆ.ಯವರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ಶಾಸಕರಾದ ಶ್ರೀ ವೇದವ್ಯಾಸ್ ಕಾಮತ್ ವಹಿಸಿದ್ದರು.

ರಾಜ್ಯ ಮಟ್ಟದ "ಅತ್ಯುತ್ತಮ ಸಹಕಾರ ಸಂಘ" ಪ್ರಶಸಿಯು ನಮ್ಮ ಸಂಘಕ್ಕೆ ನಾಲ್ಕನೇ ಬಾರಿಗೆ ಲಭಿಸಿದೆ ಎಂದು ತಿಳಿಸಲು ತುಂಬಾ ಹೆಮ್ಮೆ ಪಡುತ್ತೇವೆ. ಅಲ್ಲದೆ ಜಿಲ್ಲಾ ಮಟ್ಟದಲ್ಲಿ ಎಸ್.ಸಿ.ಡಿ.ಸಿ.ಸಿ. ಬ್ಯಾಂಕಿನವರು ನೀಡುವ "ಅತ್ಯುತ್ತಮ ಸಹಕಾರ ಸಂಘ" ಪ್ರಶಸ್ತಿ 8 ಬಾರಿ ಲಭಿಸಿರುವುದು ಇಲ್ಲಿ ಉಲ್ಲೇಖನೀಯ.

## ಹುಟ್ಟು ಹಬ್ಬದ ಶುಭಾಶಯಗಳು

| ಸಿಬ್ಬಂದಿ ಹೆಸರು | ಶಾಖೆ | ಸಿಬ್ಬಂದಿ ಹೆಸರು | ಶಾಖೆ |
|---|---|---|---|
| ಶ್ರೀಮತಿ ಹರಿಣಿ ರೈ ಬಿ. | ಸುಳ್ಯ | ಶ್ರೀ ವಿನಯ ಕುಮಾರ್ ಶೆಟ್ಟಿ | ಹೆಬ್ರಿ |
| ಕು. ಸಪ್ತಮಿ ಎಸ್. ರೈ | ಪುತ್ತೂರು | ಶ್ರೀ ರೋಹಿತ್ ಎಂ.ಜೆ. | ಉಪ್ಪಿನಂಗಡಿ |
| ಶ್ರೀಮತಿ ವೀಣಾ ಶೆಟ್ಟಿ | ವಿಟ್ಲ | ಕು. ರಮ್ಯ | ಬೈಂದೂರು |
| ಶ್ರೀ ಗೋಪಾಲಕೃಷ್ಣ ಪಿ. | ತೊಕ್ಕೊಟ್ಟು | ಶ್ರೀ ರಮೇಶ್ ಕೆ. | ಮುಲ್ಕಿ |
| ಶ್ರೀ ಧನಂಜಯ ಶೆಟ್ಟಿಗಾರ್ | ಕುಂದಾಪುರ | ಶ್ರೀ ಪಾಂಡುರಂಗ ನ್ಯಾಕ್ | ಬ್ರಹ್ಮಾವರ |
| ಶ್ರೀಮತಿ ರಾಧಿಕ ಎಂ. | ಸುಳ್ಯ | ಶ್ರೀ ನಿತೇಶ್ ಕುಮಾರ್ | ಮಂಗಳೂರು |
| ಶ್ರೀ ಹರೀಶ್ | ಕೇಂದ್ರ ಕಛೇರಿ | | |

Private Circulation only

**BOOK-POST**

**To,**

If not delivered please return to :

**SRI RAMAKRISHNA CREDIT CO-OP. SOCIETY LTD.**

2nd Floor, Amruthotsava Building, Bunts Hostel Circle, Mangalore - 575 003.